**CC 4467/2023**

**ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ಗಳ**
**ನ್ಯಾಯಾಲಯ, ವಿಜಯನಗರ ಜಿಲ್ಲೆ, ಹೊಸಪೇಟೆ.**

**ಸಿಸಿ ನಂಬರ್ 4467/2023**

**ಸಿ ಡಬ್ಲ್ಯೂ -10**
**ಪಿ ಡಬ್ಲ್ಯೂ - 10**

| | |
|---|---|
| **ಸಾಕ್ಷಿಯ ಹೆಸರು -** | **ನಬೀ ರಸೂಲ್** |
| **ತಂದೆಯ ಹೆಸರು -** | **ಬಿ ಕಲೀಲ ಸಾಬ** |
| **ವಯಸ್ಸು -** | **44 ವರ್ಷಗಳು** |
| **ಉದ್ಯೋಗ -** | **ಚಾಲಕ** |
| **ವಾಸಸ್ಥಳ -** | **ಹೊಸಪೇಟೆ** |

**ಸಾಕ್ಷಿಯನ್ನು ದಿನಾಂಕಃ 28-11-2025 ರಂದು ಪ್ರಾಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎ. ಪಿ. ಪಿ. ಅವರಿಂದ**

ನನಗೆ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ನಾನು ಪೋಲಿಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ. ನ್ಯಾಯಾಲಯದ ಮುಂದಿರುವ ಆರೋಪಿತರ ಪರಿಚಯ ಇರುವುದಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಮಾನ್ಯ ಎ.ಪಿ.ಪಿ. ಅವರು ಅನುಮತಿ ಕೇಳಿದ್ದು, ಅನುಮತಿಯನ್ನು ನೀಡಲಾಯಿತು.)**

**ಪಾಟೀ ಸವಾಲು ಮಾನ್ಯ ಎ ಪಿ ಪಿ ಅವರಿಂದಃ**

ಡಿಸೆಂಬರ್ -2021 ರಲ್ಲಿ ನಾನು ಸಂಡೂರಿಗೆ ದುಡಿಯಲು ಹೋಗಿದ್ದಾಗ ನನ್ನ ಅಣ್ಣ ಚಾಸಾ -12 ರವರು ಕರೆ ಮಾಡಿ ಊರಮ್ಮನ ಬಯಲಿನ ನಮ್ಮ ಮನೆಯಲ್ಲಿ ಕಳ್ಳತನ ಆಗಿದೆ ಎಂದು ತಿಳಿಸಿದ್ದ ಅಂದರೆ ಸರಿಯಲ್ಲ. ನನ್ನ ಪರ್ಸ ಮತ್ತು ಒಂದು ಪೆನಡ್ರೈವ್ ಕಳ್ಳತನ ಆಗಿತ್ತು ಅಂದರೆ ಸರಿಯಲ್ಲ. ನಾನು ಸದರಿ ವಿಚಾರ ಪೋಲಿಸರಿಗೆ ತಿಳಿಸಿರಲಿಲ್ಲ ಅಂದರೆ ಸರಿಯಲ್ಲ.

ದಿಃ 11-02-2022 ರಂದು ಪೋಲಿಸರು ನನ್ನ ಅಣ್ಣ ತಮ್ಮಂದಿರನ್ನು ಠಾಣೆಗೆ ಕರೆಯಿಸಿ ಕಳ್ಳತನ ಆಗಿದ್ದ ಪೆಂಡರೈವ್ ಇನ್ನೊಬ್ಬರ ಮನೆಯಲ್ಲಿ ಕಳ್ಳತನದ ಪ್ರಕರಣದ ತನಿಖೆ ಮಾಡುವಾಗ ಸಿಕ್ಕಿರುತ್ತದೆ ಎಂದು ಅದರಲ್ಲಿನ ವಿಡಿಯೋವನ್ನು ತೋರಿಸಿದರು ಅಂದರೆ ಸರಿಯಲ್ಲ. ನಾನು ಸದರಿ ಪೆಂಡರೈವ್ ಕಳ್ಳತನ ಆದ ಬಗ್ಗೆ ನಾನು ಪೋಲಿಸರಿಗೆ ಅದೇ ದಿನ ಹೇಳಿಕೆ ನೀಡಿರುತ್ತೇನೆ ಅಂದರೆ ಸರಿಯಲ್ಲ. ಸಾಕ್ಷಿ ನೀಡಿಲ್ಲ ಎಂಬ ಹೇಳಿಕೆಯ ಭಾಗವನ್ನು ನಿಪಿಃ 12 ಎಂದು ಗುರುತಿಸಲಾಯಿತು. ನಿಪಿಃ 12 ರಂತೆ ಹೇಳಿಕೆ ನೀಡಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

**ಪಾಟೀ ಸವಾಲು ಆರೋಪಿ ಪರ ಶ್ರೀ ಬಿ. ಸಿ . ಎಂ., ವಕೀಲರಿಂದಃ** ಇಲ್ಲಾ.

ಮರುವಿಚಾರಣೆ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ., ವಿಜಯನಗರ ಜಿಲ್ಲೆ, ಹೊಸಪೇಟೆ.